**O.S. / 3566/2021**
**PW.1**

ದಿನಾಂಕಃ **06.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **2** ಮತ್ತು **3** ನೇ ಪ್ರತಿವಾದಿಗಳ ಪರ ಶ್ರೀ.ಕೆ ವಿ ವಿ ವಕೀಲರಿಂದಃ

(ರಮೇಶ, ಲೊಕೇಶ, ಹರೀಶ, ಅಶ್ವಿನಿ) ವಾದಿ 2 ರಿಂದ 5 ನಿಮಗೆ ಕೇಸು ನಡೆಸಲು ಅಧಿಕಾರವನ್ನು ಕೊಟ್ಟಿದ್ದಾರೇಯೆ ಎಂದರೆ ಹೌದು. ವಾದಿ 2 ರಿಂದ 5 ರವರು POA ಯನ್ನು ಅವರ ಪರವಾಗಿ ಕೇಸು ನಡೆಸಲು ನಿಮಗೆ ಬರೆದುಕೊಟ್ಟಿದ್ದರಾ ಎಂದರೆ ಮೌಖಿಕವಾಗಿ ಹೇಳಿದ್ದರು. ಮೌಖಿಕವಾಗಿ ಹೇಳಿದ್ದರು ಮತ್ತು ಜಿ ಪಿ ಎ ಬರೆದುಕೊಟ್ಟಿದ್ದಾರೆ. ವಾದಿ 2 ರಿಂದ 5 ರವರು ನಿಮಗೆ ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ ನೀವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ವಾದ ಪತ್ರಕ್ಕೆ ನೀವು ಮಾತ್ರ ಸಹಿ ಮಾಡಿದ್ದೀರಿ ವಾದಿ 2 ರಿಂದ 5 ರವರು ಸಹಿ ಮಾಡಿಲ್ಲ ಎಂದರೆ ಸರಿ. ವಾದಿ 2 ರಿಂದ 5 ರವರ ಅನುಮತಿ ಇಲ್ಲದೆ ಈ ದಾವೆಯನ್ನು ನೀವು ಸಲ್ಲಿಸಲು ಬರುವುದಿಲ್ಲ ಎಂದರೆ ಅವರೆಲ್ಲರೂ ಅನುಮತಿ ನೀಡಿದ್ದರಿಂದಲೇ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. ಈ ದಾವೆಯಲ್ಲಿ ಹೇಳಿರುವ ಅಂಶಗಳು ಮತ್ತು ದಾಖಲೆಗಳ ವಿಚಾರ ನಿಮಗೆ ಗೊತ್ತಿದೇಯೆ ಎಂದರೆ ಹೌದು. ನಿಪಿ-6 ಸಾಕ್ಷಿಗೆ ತೋರಿಸಿ ನೀವು 4 ಜನರು ವಿಭಾಗ ಮಾಡಿಕೊಂಡಿರುವ ಪತ್ರ ಎಂದರೆ ಸಾಕ್ಷಿ ನಿಪಿ-6 ನ್ನು ಪರಿಶೀಲಿಸಿ ಹೌದು ಎಂದು ಹೇಳಿರುತ್ತಾರೆ. ಈ ವಿಭಾಗ ಪತ್ರಕ್ಕೆ ನೀವು ಓದಿ ಸಹಿ ಮಾಡಿದ್ದರಾ ಅಥವಾ ಓದದೇ ಸಹಿ ಮಾಡಿದ್ದರಾ ಎಂದರೆ ಓದದೆ ಸಹಿ ಮಾಡಿದ್ದೆ. ನಾನು ಓದದೇ ಸಹಿ ಮಾಡಿದ್ದೆ

ಎಂಬ ವಿಚಾರವನ್ನು ನಿಮ್ಮ ವಕೀಲರಿಗೆ ದಾವೆ ಸಲ್ಲಿಸುವ ಕಾಲಕ್ಕೆ ತಿಳಿಸಿದ್ದರಾ ಎಂದರೆ ಹೌದು. ನಿಮ್ಮ ವಾದ ಪತ್ರದಲ್ಲಿ ನಾನು ವಿಭಾಗ ಪತ್ರಕ್ಕೆ ಓದದೇ ಸಹಿ ಮಾಡಿದ್ದೆ ಅವರು ನನಗೆ ಹಣ ಕೊಡಲಿಲ್ಲ ಎಂದು ಹೇಳಿದ್ದೀರಾ ಎಂದರೆ ಸರಿ. ನಿಪಿ-6 ವಿಭಾಗ ಪತ್ರದಲ್ಲಿ ಎ, ಬಿ, ಸಿ, ಡಿ ಎಂದು 4 ಭಾಗಗಳಾಗಿ ವಿಂಗಡಣೆ ಆಗಿ ನೊಂದಣಿ ಆಗಿರುತ್ತದೆ ಎಂದರೆ ನಿಪಿ-6 ರಲ್ಲಿ ಆ ರೀತಿ ಬರೆದಿದೆ ಹೆಣ್ಣು ಮಕ್ಕಳಿಗೆ (ನಮಗೆ) ಕೊಟ್ಟಿಲ್ಲ. ನಿಪಿ-6 ಶೆಡ್ಯೂಲ್- ಸಿ ಮತ್ತು ಡಿ ಅಕ್ಕ-ತಂಗಿಯರು ನಗದಾಗಿ ನಿಮ್ಮ ಭಾಗದ ಹಣ ಪಡೆದುಕೊಂಡಿದ್ದಾರಾ ಎಂದು ಬರೆದಿದೆ ಎಂದರೆ ಆ ರೀತಿ ಬರೆಸಿಕೊಂಡಿದ್ದಾರೆ ಆದರೆ ನಮಗೆ ಏನೂ ಕೊಟ್ಟಿಲ್ಲ. ಈ ವಿಚಾರ ನಿಮಗೆ ಈ ದಾವೆ ಸಲ್ಲಿಸಿದ ನಂತರ ನಿಮಗೆ ಗೊತ್ತಾಯಿತೆ ಎಂದರೆ ಹೌದು. ಅದರ ಪೂರ್ವದಲ್ಲಿ ನಿಮ್ಮ ಅಣ್ಣಂದಿರನ್ನು ನೀವು ಹೋಗಿ ಹಣ ಕೊಡಿ ಎಂದು ಯಾವತ್ತು ಕೇಳಿಲ್ಲ ಎಂದರೆ ಸರಿ. ನೀವು ಹಣ ಪಡೆದುಕೊಂಡಿದ್ದಕ್ಕೆ ಯಾರನ್ನು ಹೋಗಿ ಕೇಳಿರಲಿಲ್ಲ ಎಂದರೆ ಸರಿ. ನಿಪಿ-7 ಶಿವಲಿಂಗಂರವರು ನಿಮಗೆ ಬರೆದುಕೊಟ್ಟ ಕರಾರು ಎಂದರೆ ಸರಿ. ರೂ. 3 ಲಕ್ಷವನ್ನು ನೀವು ಮನೆ ಖಾಲಿ ಮಾಡುವ ಸಮಯದಲ್ಲಿ ಕೊಡುತ್ತೇವೆ ಎಂದು ಬರೆಸಿದ್ದೀರಾ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಭಾಗ ಆಗಿರುವ ವಿಚಾರದ ಬಗ್ಗೆ ಏನೂ ಬರೆದಿಲ್ಲ ನೀವು ಖಾಲಿ ಮಾಡಿದರೆ ರೂ.3 ಲಕ್ಷ ಕೊಡುತ್ತೇವೆ ಎಂದು ಬರೆದಿದೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ನೀವು ಒಂದು ಭಾಗದಲ್ಲಿರುವ ಮನೆಯನ್ನು ಖಾಲಿ ಮಾಡುವ ಕಾಲಕ್ಕೆ ರೂ.3 ಲಕ್ಷ ಕೊಡುತ್ತಾರೆ ಎಂದು ಬರೆಸಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನಿಪಿ-7 ನಾನು ಹಣ ಕೊಡುವವರೆಗೂ

ನೀವು ಅಲ್ಲೆ ವಾಸವಿರಬಹುದು ಎಂದು ಬರೆದಿರುವ ಕಾರಾರು ಎಂದರೆ ಅಲ್ಲಿ ಬರೆದಿರುವುದು ನನಗೆ ಗೊತ್ತಿಲ್ಲ, ಬಾಲುರವರು ನಾನು ಹಣ ಕೊಟ್ಟ ನಂತರ ಖಾಲಿ ಮಾಡಿ ಎಂದು ಹೇಳಿದ್ದರು. ಸಾಕ್ಷಿ ನಿಪಿ-7 ನ್ನು ಪರಿಶೀಲಿಸಿ ಅದರಲ್ಲಿ ಸೆಲ್ವಿ, ಬಾಲು, ನನ್ನ ತಂಗಿ ಕೃಷ್ಣವೇಣಿ ಸಹಿ ಮಾಡಿದ್ದಾರೆ ಎಂದು ಅವರ ಸಹಿಗಳನ್ನು ಗುರುತಿಸಿರುತ್ತಾರೆ. ನಿಪಿ-7 ಅವರೆಲ್ಲರ ಮುಂದೆಯೆ ಆಗಿದ್ದ ಕರಾರು ಪತ್ರ ಎಂದರೆ ಸರಿ. ನಿಪಿ-6 ರಲ್ಲಿ ಬಿ ಶಶಿಕಲಾ, ಸೆಲ್ವಿ , ಕೃಷ್ಣವೇಣಿ ಮಾಡಿರುವ ಪತ್ರದಲ್ಲಿ ನಾನು ಸಹಿ ಮಾಡಿಲ್ಲ. ಅವರ ಮುಂದೆಯೆ ನಿಪಿ-6 ನೊಂದಣಿ ಆಗಿತ್ತು ನಿಮಗೆ ಹಣ ಕೊಡುವ ಕಾಲಕ್ಕೆ ಅವರಿಬ್ಬರೂ ಇದ್ದರೂ ಎಂದರೆ ಸರಿಯಲ್ಲ. ನಿಮ್ಮ ಅಣ್ಣಂದಿರು ತೀರಿಹೋಗುವ ಪೂರ್ವದಲ್ಲಿ ದಾವಾ ಸಲ್ಲಿಸಲು ನಿಮಗೆ ತೊಂದರೆ ಇತ್ತೆ ಎಂದರೆ ಇರಲಿಲ್ಲ. ಹಣ ಕೊಟ್ಟವರು ನಿಮ್ಮ ಅಣ್ಣಂದಿರು ಅವರು ತೀರಿಕೋಂಡ ನಂತರ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ದಾವೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣಂದಿರು ತೊಂದರೆ ಕೊಟ್ಟಿಲ್ಲ ಅವರು ತೀರಿಕೊಂಡ ನಂತರ ಪ್ರತಿವಾದಿಗಳು ತೊಂದರೆ ಕೊಟ್ಟಿದರು ಆದ್ದರಿಂದ ಈ ದಾವೆ ಸಲ್ಲಿಸಿದ್ದೆ. ನೊಂದಣಿ ಆದ ನಂತರ ನಿಮಗೂ ಪ್ರತಿವಾದಿಗಳಿಗೂ ಸಂಬಂಧವೆ ಕಳೆದುಹೋಗಿತ್ತು ಯಾವ ಕಾರಣಕ್ಕೆ ನಿಮಗೆ ತೊಂದರೆ ಕೊಟ್ಟಿದ್ದರು ಎಂದರೆ ನೀರು ಹಿಡಿಯಲು ತೊಂದರೆ ಕೊಡುತ್ತಾರೆ. ಆ ವಿಚಾರಕ್ಕೆ ನೀವು ದಾವೆ ಸಲ್ಲಿಸಿದ್ದೀರಿ ಎಂದರೆ ಹೌದು ನಮ್ಮ ತಂದೆಯವರ ಆಸ್ತಿ ಕೇಳಿ ದಾವೆ ಸಲ್ಲಿಸಿದ್ದೆ. ನಿಪಿ-14 ದಾವೆ ಸಲ್ಲಿಸುವ ಕಾಲಕ್ಕೆ ಕೊಟ್ಟಿದ್ದ ನೋಟಿಸ ಎಂದರೆ ನೊಂದಣಿ ಆದ 20 ದಿವಸಕ್ಕೆ ಬಿ ಬಿ ಎಂ ಪಿ ಗೆ ಹೋಗಿ

ನೋಟಿಸ ಕೊಟ್ಟಿದ್ದೆ. ಅದೇ ತರಹ ನಿಪಿ-17 ರಂತೆ ಧನಂಜಯ ಎಂಬ ವಕೀಲರಿಂದ ಶಿವಲಿಂಗಂ ಮತ್ತು ಶ್ರೀನಿವಾಸ ರವರಿಗೆ ನೋಟಿಸ ಕೊಟ್ಟಿದ್ದೀರಿ ಎಂದರೆ ನಾನು ಯಾರಿಗೂ ನೋಟಿಸ ಕೊಟ್ಟಿಲ್ಲ. ಅದೇ ತರಹ ನೀವು ಕೊಟ್ಟಿರುವ ನೋಟಿಸಗಳು ಯಾವುದು ದಾವೆಗೆ ಸಂಬಂಧಪಟ್ಟಿದಲ್ಲ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಂಬಂಧ ಕೊಟ್ಟಿದ್ದ ನೋಟಿಸಗಳು ಎಂದರೆ ನನಗೆ ಆಸ್ತಿ ಬೇಕು ಎಂದು ನೋಟಿಸ ಕೊಟ್ಟಿದ್ದೆ. ನೀವು ಶಿವಲಿಂಗಂ ರವರ ಹೆಂಡತಿ ಮೇಲೆ ದಾವೆ ಸಲ್ಲಿಸಿದ್ದೀರಿ ಎಂದರೆ ಶಶಿಕಲಾ ಮತ್ತು ಅವರ ಮಗಳ ಮೇಲೆ ದಾವೆ ಸಲ್ಲಿಸಿದ್ದೇನೆ. ಶಶಿಕಲಾ ಮತ್ತು ಅವರ ಮಗಳು ಹಣ ಕೊಡಬೇಕು ಎಂದು ಈ ದಾವೆಯಲ್ಲಿ ನೀವು ಎಲ್ಲೂ ಹೇಳಿಲ್ಲ ಎಂದರೆ ನಮ್ಮ ಅಣ್ಣ ಹೇಳಿದ್ದರು ಅವರು ಬದುಕಿದುದ್ದರಿಂದ ನಾನು ಶಶಿಕಲಾ ಮತ್ತು ಅವರ ಮಗಳನ್ನು ಹಣ ಕೇಳಿರಲಿಲ್ಲ. ನಿಮ್ಮ ತಂಗಿ ಮಕ್ಕಳು ಯಾರು ಈ ದಾವೆಯನ್ನು ಸಲ್ಲಿಸಿಲ್ಲ ನೀವು ಮಾತ್ರ ಈ ದಾವೆಯನ್ನು ಸಲ್ಲಿಸಿದ್ದೀರಿ ಅವರು ಈ ದಾವೆಯಲ್ಲಿ ಪಕ್ಷಕಾರರು ಅಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ವಾದಿ 2 ರಿಂದ 5 ರವರು ಸಹಿ ಮಾಡೆ ಇಲ್ಲ ನೀವು ಮಾತ್ರ ಸಹಿ ಮಾಡಿರುವುದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿ 2 ರಿಂದ 5 ಸಹಿ ಮಾಡಿಕೊಟ್ಟಿದ್ದಾರೆ. ವಾದಿ 2 ರಿಂದ 5 ರವರು ಭಾಗ ಕೇಳಿಲ್ಲ ಮತ್ತು ಅವರು ಯಾರು ವಾದ ಪತ್ರದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಈಗಾಗಲೆ ವಿಭಾಗ ಆಗಿದ್ದರು ಈ ದಾವೆಯನ್ನು ನಿಮ್ಮ ಭಾಗ ಕೋರಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ.

**O.S. / 3566/2021**
**PW.1**

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ, ಬೆಂಗಳೂರು.**